ಸುದ್ದಿಸಂಚಯ

ಕನ್ನಡನಾಡಿನಲ್ಲಿ ರಾಮಕೃಷ್ಣ ಮತ್ತಾಸಂಘದ ಮುನ್ನಡೆ

ವಿವೇಕವಾಹಿನಿ ಕಾರ್ಯಕ್ರಮ

ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದ ವತಿಯಿಂದ ಆರು ದಿನಗಳ ಕಾಲ **'ವಿವೇಕ ವಾಹಿನಿ'** ಎಂಬ ಜನಸಂಪರ್ಕ ಅಭಿಯಾನ ಕಾರ್ಯಕ್ರಮವನ್ನು ನಡೆಸಲಾಯಿತು. ಇದರ ಮುಖ್ಯ ಉದ್ದೇಶ ಮೌಲ್ಯ ಶಿಕ್ಷಣದ ಪ್ರಸಾರ. ವೇದ ಪಾರಾಯಣ, ಭಜನೆ, ಪ್ರವಚನಗಳು, ತರಗತಿಗಳು, ದೃಶ್ಯ–ಶ್ರಾವ್ಯ ಮಾಧ್ಯಮ ಪ್ರಸ್ತುತಿ ಮತ್ತು ಪುಸ್ತಕ ಮಾರಾಟ ಮತ್ತು ಕೆಲವು ಆರಿಸಿದ ಪುಸ್ತಕಗಳ ಉಚಿತ ವಿತರಣೆ – ಇವುಗಳನ್ನು ಇದು ಹೊಂದಿತ್ತು. ಆಶ್ರಮದ ಮುಖ್ಯಸ್ಥರಾದ ಸ್ವಾಮಿ ರಾಘವೇಶಾನಂದಜಿ ಅವರ ನೇತೃತ್ವದಲ್ಲಿ ಏಳು ಜನರ ತಂಡವು ಜುಲೈ ೨೯ ರಿಂದ ಆಗಸ್ಟ್ ೩ ರವರೆಗೆ, ಬೆಳಗಾವಿ, ಬಾಗಲಕೋಟೆ ಮತ್ತು ರಾಯಚೂರು ಜಿಲ್ಲೆಗಳ ಗ್ರಾಮಾಂತರ ಶಾಲಾ ಕಾಲೇಜುಗಳಲ್ಲಿ ಭೇಟಿಕೊಟ್ಟಿತು. ಸುಮಾರು ೫,೨೦೦ಕ್ಕೂ ವಿದ್ಯಾರ್ಥಿಗಳು ಇದರ ಪ್ರಯೋಜನವನ್ನು ಪಡೆದು ಕೊಂಡರು. ವಿದ್ಯಾರ್ಥಿಗಳಲ್ಲಿ ಚಾರಿತ್ರ್ಯನಿರ್ಮಾಣ, ವ್ಯಕ್ತಿತ್ವದ ಬೆಳವಣಿಗೆ, ಮೌಲ್ಯಗಳ ಪರಿಚಯ – ಇವುಗಳ ಬಗ್ಗೆ ಅರಿವು ಮೂಡಿಸುವ ಪ್ರಯತ್ನವು ಈ ಅಭಿಯಾನದ ಮೂಲಕ ನಡೆಯಿತು.

ಯೋಗಶಿಕ್ಷಕರ ತರಬೇತಿ ಶಿಬಿರ

ಮಂಗಳೂರಿನ ರಾಮಕೃಷ್ಣ ಮಠದಲ್ಲಿ, ಶ್ರೀಶಾಂತಿವನ ಟ್ರಸ್ಟ್, ಧರ್ಮಸ್ಥಳ ಇದರ ಆಶ್ರಯದೊಂದಿಗೆ ಜಿಲ್ಲಾ ಮಟ್ಟದ ಯೋಗ ಶಿಕ್ಷಕರ ತರಬೇತಿ ಶಿಬಿರವನ್ನು ನಡೆಸಲಾಯಿತು. ಜುಲೈ ೧೭ ರಂದು ನಡೆದ ಈ ಸಮಾವೇಶದಲ್ಲಿ ಜರುಗಿದ ಪ್ರವಚನಗಳು ಮತ್ತು ಸಂವಹನ ಕಾರ್ಯಕ್ರಮಗಳಲ್ಲಿ ಇನ್ನೂರಕ್ಕೂ ಹೆಚ್ಚು ಯೋಗ ಶಿಕ್ಷಕರು ಪಾಲ್ಗೊಂಡಿದ್ದರು.

ಆಟೋರಿಕ್ಷಾ ಚಾಲಕರಿಗೆ ಆಧ್ಯಾತ್ಮಿಕ ಶಿಬಿರ

ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿ ಮೈಸೂರು ನಗರದ ಆಟೋ ಚಾಲಕರಿಗಾಗಿ ಅರ್ಧದಿನದ ಆಧ್ಯಾತ್ಮಿಕ ಶಿಬಿರವನ್ನು ಆಗಸ್ಟ್ ೩೦ ರಂದು ನಡೆಸಲಾಯಿತು. ಈ ಶಿಬಿರವು ಭಜನೆ, ಸರಳ ಪ್ರವಚನ, ಸಿ.ಡಿ. ಪ್ರದರ್ಶನ ಮುಂತಾದ ಕಾರ್ಯಕ್ರಮಗಳನ್ನು ಹೊಂದಿತ್ತು. ಆಟೋ ಚಾಲಕರು ಪ್ರಾಮಾಣಿಕವಾಗಿ ವರ್ತಿಸುತ್ತ, ಪ್ರಯಾಣಿಕರೊಡನೆ ಸಹಕರಿಸುವಂತೆ ಅವರಿಗೆ ಪ್ರೇರಣೆಯನ್ನು ನೀಡುವುದು ಮತ್ತು ಅವರಿಗೆ ಉತ್ತಮ ಸಂಸ್ಕೃತಿಯ ಪರಿಚಯವನ್ನು ಮಾಡಿಕೊಡುವುದು ಈ ಶಿಬಿರದ ಉದ್ದೇಶವಾಗಿತ್ತು.

ಪ್ರವಚನ ಕಾರ್ಯಕ್ರಮವನ್ನು ಸ್ವಾಮಿ ಜಿತಕಾಮಾನಂದಜಿ ಅವರು ನಡೆಸಿಕೊಟ್ಟರು. ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿತ್ಯಸ್ಥಾನಂದಜಿ ಅವರ ಮಾರ್ಗದರ್ಶನದಲ್ಲಿ ನಡೆದ ಈ ಶಿಬಿರದ ನಿರ್ವಹಣೆಯನ್ನು ಶ್ರೀ ಸ್ವಾಮಿ ಲಿಂಗಪ್ಪ, ಶ್ರೀ ಸೋಮಶೇಖರ್, ಶ್ರೀ ಮಹಾದೇವ ಮುಂತಾದ ಭಕ್ತರು ನಿರ್ವಹಿಸಿದ್ದರು. ಇವರು ಆಟೋ ಚಾಲಕರನ್ನು ಈ ಶಿಬಿರಕ್ಕೆ ಕರೆದುಕೊಂಡು ಬರುವಲ್ಲಿ, ತುಂಬ ಶ್ರಮಪಟ್ಟಿದ್ದಾರೆ. ಶಿಬಿರದ ಕೊನೆಯಲ್ಲಿ ಎಲ್ಲರಿಗೂ ಅಂಗವಸ್ತ್ರಗಳನ್ನು ವಿತರಿಸ ಲಾಯಿತು. ನಂತರ ಒಳ್ಳೆಯ ಊಟವನ್ನು ನೀಡಲಾಯಿತು. ಭಾಗ ವಹಿಸಿದ್ದ ಆಟೋ ಚಾಲಕರೆಲ್ಲರೂ ಸಂತೃಪ್ತಿಯಿಂದ ಹಿಂದಿರುಗಿದರು.

ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲಿ ಪರಿಹಾರ ಕಾರ್ಯ

ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲಿನ ಅತಿ ಭೀಕರ ಮತ್ತು ದುರಂತಮಯ ಪ್ರವಾಹ ಪರಿಸ್ಥಿತಿಯ ಸಮಯದಲ್ಲಿ ರಾಮಕೃಷ್ಣ ಮಿಷನ್ ಸಂತ್ರಸ್ತರ ಸಹಾಯಕ್ಕೆ ಧಾವಿಸಿದೆ. ವಿಪತ್ತಿಗೆ ಒಳಗಾಗಿರುವ ಸಾವಿರಾರು ಜನರಿಗೆ ಪ್ರಾಥಮಿಕ ಪರಿಹಾರವನ್ನು ಒದಗಿಸುವ ಕಾರ್ಯವನ್ನು ಈಗಾಗಲೇ ಆರಂಭಿಸಿದೆ. ಅದರ ವಿವರಗಳು ಹೀಗಿವೆ:

ಬಿಹಾರ : ಅವಲಕ್ಕಿ, ಸಕ್ಕರೆ ಮತ್ತು ಹ್ಯಾಲೋಜಿನ್ ಮಾತ್ರೆಗಳನ್ನು, ಕಟಿಹಾರ್ ಜಿಲ್ಲೆಯ ಕುರ್ಸೆಲಾ ಬ್ಲಾಕ್ ನ ಸಾವಿರಾರು ಪ್ರವಾಹ ಸಂತ್ರಸ್ತರಿಗೆ ವಿತರಿಸಲಾಗುತ್ತಿದೆ. ಹಾಗೆಯೇ ಸಹರ್ಸಹಾ ಜಿಲ್ಲೆಯಲ್ಲೂ ಈ ಪದಾರ್ಥಗಳನ್ನು ವಿತರಿಸಲು ಎಲ್ಲ ಬಗೆಯ ಏರ್ಪಾಡುಗಳನ್ನು ಮಾಡಿಕೊಳ್ಳಲಾಗುತ್ತಿದೆ.

ಉತ್ತರ ಪ್ರದೇಶ : ಲಕ್ನೌ ಜಿಲ್ಲೆಯ ಬಕ್ಷಿ–ಕಾ–ತಾಲಾಬ್ ತಹಶೀಲ್ ಪ್ರದೇಶದ ನಿರಾಶ್ರಿತ ಶಿಬಿರಗಳಲ್ಲಿ ನೆಲೆಸಿರುವ, ೩೦೦೦ ಅತಿ ತೀವ್ರವಾಗಿ ವಿಪತ್ತಿಗೆ ಒಳಗಾದ ಸಂತ್ರಸ್ತರಿಗೆ, ಬೇಯಿಸಿದ ಮತ್ತು ಬೇಯಿಸದ ಆಹಾರ ಪದಾರ್ಥಗಳನ್ನು ಮತ್ತು ವೈದ್ಯಕೀಯ ಪರಿಹಾರವನ್ನು, ಈಗಾಗಲೇ ಒದಗಿಸಲಾಗಿದೆ.

ಎರಡೂ ಕಡೆಗಳಲ್ಲಿ ಪರಿಹಾರ ಕಾರ್ಯ ಮುಂದುವರಿಯುತ್ತಿದೆ.

ಈ ಪರಿಹಾರಕಾರ್ಯಗಳಿಗೆ ದೇಣಿಗೆ ನೀಡಬಯಸುವವರು, ಡಿ.ಡಿ. ಅಥವಾ ಚೆಕ್‌ಗಳನ್ನು ಕೊಲ್ಕತಾದಲ್ಲಿ ಸಂದಾಯವಾಗುವ ಹಾಗೆ, 'Ramakrishna Mission' ಎಂಬ ಹೆಸರಿನಲ್ಲಿ ಈ ವಿಳಾಸಕ್ಕೆ ಕಳಿಸಬೇಕಾಗಿ ಕೋರಿದೆ. ಎಲ್ಲಾ ದೇಣಿಗೆಗಳಿಗೂ ಆದಾಯ ತೆರಿಗೆ ಅಧಿನಿಯಮ 80–G ಅಡಿಯಲ್ಲಿ ತೆರಿಗೆ ವಿನಾಯತಿ ದೊರಕುತ್ತದೆ: **The General Secretary, Ramakrishna Mission, Belur Math, Howrah, 711202, West Bengal**

ಬೇಲೂರು ಮಠ
01.09.2008

ಸ್ವಾಮಿ ಪ್ರಭಾನಂದ
ಪ್ರಧಾನ ಕಾರ್ಯದರ್ಶಿ

Managing Editor : Swami Nityasthananda *Editor Swami Vireshananda*
Printed by Sri J. B. Pattabhi and Published by Swami Nityasthananda, on behalf of Sri Ramakrishna Ashrama, Yadavagiri, Mysore and Printed at Pattabi Enterprises, Ramavilasa Road, Mysore and published at Sri Ramakrishna Ashrama, Yadavagiri, Mysore.